ವಿಷಯ:- ರಾಜ್ಯದಲ್ಲಿರುವ ನೇಕಾರರ ಸಂಖ್ಯೆ

1073 (1897) ಶ್ರೀ. ಕುಂಬಳೆ ಸುಂದರ್‌ರಾವ್ (ಸುರತ್ಕಲ್):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೇಕಾರಿಕೆಯಲ್ಲಿ ತೊಡಗಿರುವ ನೇಕಾರರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು).

ಆ) ನೇಕಾರಿಕೆಯು ಲಾಭದಾಯಕ ಉದ್ಯಮವಲ್ಲ ಎಂಬ ಕಾರಣಕ್ಕಾಗಿ ನೇಕಾರರು ತಮ್ಮ ವೃತ್ತಿಯನ್ನು ತ್ಯಜಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ನೇಕಾರಿಕೆಯನ್ನು ಪ್ರೋತ್ಸಾಹಿಸುವ ದಿಶೆಯಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಇ) ಕೇಂದ್ರ ಸರ್ಕಾರದವರಿಂದ ನೇಕಾರರ ವಿವಿಧ ಯೋಜನೆಗಳಿಗಾಗಿ ಬಂದ ಮೊತ್ತ ಎಷ್ಟು ಹಾಗೂ ಆದರಲ್ಲಿ ವಿನಿಯೋಗವಾದ ಮೊತ್ತವೆಷ್ಟು? ವಿನಿಯೋಗವಾಗದೇ ಉಳಿದ ಮೊತ್ತವನ್ನು ಕೇಂದ್ರ ಸರ್ಕಾರಕ್ಕೆ ಹಿಂದಿರುಗಿಸಲಾಗಿದೆಯೇ?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು):-

ಅ) 83,895.

ಜಿಲ್ಲಾವಾರು ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

1.	ಬೆಂಗಳೂರು (ಗ್ರಾ)	1254
2.	ಬೆಂಗಳೂರು ನಗರ	6412
3.	ಬೆಳಗಾಂ	4954
4.	ಬಳ್ಳಾರಿ	3045
5.	ಬೀದರ್	1934
6.	ಬಿಜಾಪುರ	26463
7.	ಚಿಕ್ಕಮಗಳೂರು	787
8.	ಚಿತ್ರದುರ್ಗ	6212
9.	ದಕ್ಷಿಣ ಕನ್ನಡ	2259
10.	ಧಾರವಾಡ	9172
11.	ಗುಲ್ಬರ್ಗ	4173
12.	ಹಾಸನ	1175
13.	ಕೊಡಗು	17
14.	ಕೋಲಾರ	1385
15.	ಮಂಡ್ಯ	745

16.	ಮೈಸೂರು	1240
17.	ರಾಯಚೂರು	285
18.	ಶಿವಮೊಗ್ಗ	1000
19.	ತುಮಕೂರು	8270
20.	ಉತ್ತರ ಕನ್ನಡ	109

ಆ) ಈ ಅಂಶ ಸರ್ಕಾರದ ಗಮನಕ್ಕೆ ಬಂದಿಲ್ಲ. ನೇಕಾರರನ್ನು ಪ್ರೋತ್ಸಾಹಿಸಲು ಈ ಕೆಳಗೆ ತೋರಿಸಿದ ಯೋಜನೆಗಳು ಇವೆ:-

1. ಕೈಮಗ್ಗದ ಬಟ್ಟೆಗಳ ಮಾರಾಟದ ಮೇಲೆ ರಿಯಾಯತಿ.
2. ಕೈಮಗ್ಗ ನೇಕಾರರಿಗೆ ತರಬೇತಿ.
3. ಉಳಿತಾಯ ನಿಧಿ ಯೋಜನೆ.
4. ನೇಕಾರರಿಗೆ ಕಾರ್ಯಾಗಾರ ನಿರ್ಮಾಣ.
5. ನೇಕಾರರ ಸಹಕಾರಿ ಸಂಘಗಳಿಗೆ ಸಾಲದ ಮೇಲಿನ ಬಡ್ಡಿಗಾಗಿ ಸಹಾಯಧನ.
6. ಎನ್.ಸಿ.ಡಿ.ಸಿ. ಯೋಜನೆಯಡಿ ಸಹಾಯಧನ, ಸಾಲ ಮತ್ತು ಶೇರು ಬಂಡವಾಳ ಹೂಡಿಕೆ.
7. ಮಾರುಕಟ್ಟೆ ಅಭಿವೃದ್ಧಿ ಯೋಜನೆಯಡಿ ವಿಶೇಷ ರಿಯಾಯಿತಿ ಬದಲಾಗಿ ಸಹಾಯಾನುದಾನ.
8. ಸಮಗ್ರ ಆರೋಗ್ಯ ಪ್ರಸ್ತಾವ ಯೋಜನೆಗಳು.
9. ಕೈಮಗ್ಗ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ.
10. ನಿರಾಶ್ರಿತ ನೇಕಾರರಿಗೆ ಪಾರ್ಶ್ವಾಧನ.
11. ಕೈಮಗ್ಗ ವಸ್ತ್ರೋದ್ಯಮಕ್ಕಾಗಿ ವಿಶೇಷ ಘಟಕ ಯೋಜನೆ.
12. ಕೈಮಗ್ಗ ವಸ್ತ್ರೋದ್ಯಮಕ್ಕಾಗಿ ಗಿರಿಜನ ಉಪ ಯೋಜನೆ.
13. ಕೈಮಗ್ಗ ನೇಕಾರರಿಗಾಗಿ ಸಾಮಾಹಿಕ ಉಳಿತಾಯ ಸಂಬಂಧಿಸಿದ ವಿಮಾ ಯೋಜನೆ, ಮುಂತಾದ ಯೋಜನೆಗಳಿನ್ನು ನೇಕಾರರ ಸಮಗ್ರ ಕಲ್ಯಾಣ ಅಭಿವೃದ್ಧಿಗಳಿಗಾಗಿ ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ.

ಇ) 1995-96ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದಿಂದ ರೂ. 885.07 ಲಕ್ಷಗಳನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದ್ದು, ಸದರಿ ಮೊತ್ತವನ್ನು ವಿವಿಧ ಯೋಜನೆಗಳಿಗಾಗಿ ವಿನಿಯೋಗಿಸಲಾಗಿದೆ. ಹಾಗೂ ಯಾವುದೇ ಮೊತ್ತವನ್ನು ಕೇಂದ್ರ ಸರ್ಕಾರಕ್ಕೆ ಹಿಂತಿರುಗಿಸಿರುವುದಿಲ್ಲ.